ಜೊತೆಗೆ ಗಡಿ ಜಿಲ್ಲೆ. ಈ ಎರಡೂ ವಿಚಾರಗಳು ಸಹ ತಮ್ಮ ಗಮನದಲ್ಲಿರಬೇಕಾಗುತ್ತದೆ. ಎಲ್ಲಾ ಜಿಲ್ಲೆಗಳಿಗೆ ಸರಿಸಮನಾಗಿ ದುಡ್ಡು ಹಂಚುವುದನ್ನು ನೋಡಿದರೆ, ಬೆಳಗಾವಿ ಜಿಲ್ಲೆ ಬಹಳ ದೊಡ್ಡ ಜಿಲ್ಲೆ ಇರುವುದರಿಂದ, ನಾನು ಆಗಲೇ ಹೇಳಿದ ಹಾಗೆ ಬಕಾಸುರನ ಹೊಟ್ಟೆಗೆ ಒಂದು ಲೋಟ ಮಜ್ಜಿಗೆ ಕೊಟ್ಟಹಾಗೆ ಆಗುತ್ತದೆ. ಆದುದರಿಂದ ಬೆಳಗಾವಿ ಜಿಲ್ಲೆಗೆ ವಿಶೇಷವಾದಂತಹ ಗಮನವನ್ನು ಕೊಡಿ. ಶಾಲಾ ಕೊಠಡಿಗಳನ್ನು ಗಡಿ ಭಾಗದಲ್ಲಿ ಕಟ್ಟಬೇಕಾಗುತ್ತದೆ. ಆ ವಿಷಯಲ್ಲಿ ಸರ್ಕಾರ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುವುದರ ಜೊತೆಗೆ ಒಂದು ವರ್ಷದ ಹಿಂದೆ ನಿಲ್ಲಿಸಿರುವಂತಹ ಹಳೇ ಕೊಠಡಿಗಳನ್ನು ಪೂರ್ತಿ ಮುಗಿಸಿ ನಂತರ ಹೊಸ ಕೊಠಡಿಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಈಗಾಗಲೇ ಆ ರೀತಿಯ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ 2000-2001ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ.

204(2603)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ 2000-01ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನದ ಹಣವೆಷ್ಟು (ಜಿಲ್ಲಾವಾರು ವಿವರ ನೀಡುವುದು)?

ಆ) ಈವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಇ) ಇದುವರೆಗೂ ಖರ್ಚು ಮಾಡಲಾಗಿರುವ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ವಿವರಗಳನ್ನು ಅನುಬಂಧ - 1 ಹಾಗೂ 2ರಲ್ಲಿ ನೀಡಿದೆ.

ಆ) ವಿವರಗಳನ್ನು ಅನುಬಂಧ - 1 ಹಾಗೂ 2ರಲ್ಲಿ ನೀಡಿದೆ.

ಇ) ವಿವರಗಳನ್ನು ಅನುಬಂಧ - 1 ಹಾಗೂ 2ರಲ್ಲಿ ನೀಡಿದೆ.

ಅನುಬಂಧ- I

2000-01ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ಖರ್ಚಿನ ವಿವರಗಳು.

(ರೂ.ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತಿಯ ಹೆಸರು	ಬಿಡುಗಡೆ ಮಾಡಿದ ಅನುದಾನ	ಖರ್ಚು ಮಾಡಲಾದ ಮೊತ್ತ
1	ಬೆಂಗಳೂರು (ನಗರ)	238.67	238.67
2	ಬೆಂಗಳೂರು (ಗ್ರಾ)	193.39	179.55
3	ಬೆಳಗಾಂ	300.71	294.43
4	ಬಳ್ಳಾರಿ	155.11	147.19
5	ಬೀದರ್	155.54	152.25
6	ಬಿಜಾಪುರ	194.12	180.92
7	ಚಿಕ್ಕಮಗಳೂರು	140.04	140.72
8	ಚಿತ್ರದುರ್ಗ	163.58	150.85
9	ದಕ್ಷಿಣ ಕನ್ನಡ	156.80	154.40
10	ಧಾರವಾಡ	115.63	97.20
11	ಗುಲ್ಬರ್ಗಾ	269.36	242.95
12	ಹಾಸನ	178.85	178.50
13	ಮಡಿಕೇರಿ	74.01	73.04
14	ಕೋಲಾರ	225.72	225.64

15	ಮಂಡ್ಯ	202.97	201.51
16	ಮೈಸೂರು	197.97	161.82
17	ರಾಯಚೂರು	125.10	116.71
18	ಶಿವಮೊಗ್ಗ	166.05	148.61
19	ತುಮಕೂರು	264.98	264.82
20	ಉತ್ತರ ಕನ್ನಡ	162.82	160.59
21	ಬಾಗಲಕೋಟೆ	106.05	106.05
22	ಚಾಮರಾಜನಗರ	87.68	85.16
23	ದಾವಣಗೆರೆ	171.92	171.92
24	ಗದಗ	87.00	84.61
25	ಹಾವೇರಿ	116.51	115.00
26	ಕೊಪ್ಪಳ	84.33	84.08
27	ಉಡುಪಿ	101.66	93.04
	ಒಟ್ಟು	4436.57	4250.23

ಅನುಬಂಧ-2

2000-2001ನೇ ಸಾಲಿನಲ್ಲಿ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ ಅನುದಾನ ಮತ್ತು ವೆಚ್ಚದ ವಿವರಗಳು

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯಿತಿ ಹೆಸರು	ಗ್ರಾಮ ಪಂಚಾಯಿತಿಗಳ ಸಂಖ್ಯೆ	2000-01ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ	2000-01ನೇ ಸಾಲಿನಲ್ಲಿನ ವೆಚ್ಚ
1	ಬೆಂಗಳೂರು (ನಗರ)	112	6.3335	6.3335
2	ಬೆಂಗಳೂರು (ಗ್ರಾ)	228	12.0306	12.0306
3	ಬೆಳಗಾಂ	482	17.7297	16.3837
4	ಬಳ್ಳಾರಿ	189	10.0076	9.3328
5	ಬೀದರ್	174	8.3391	7.7181
6	ಬಿಜಾಪುರ	199	8.3673	8.3673
7	ಚಿಕ್ಕಮಗಳೂರು	227	7.38.63	7.0535
8	ಚಿತ್ರದುರ್ಗ	185	10.0116	10.0116
9	ಮಂಗಳೂರು	206	6.7298	6.7298
10	ಧಾರವಾಡ	127	4.9992	4.5042
11	ಗುಲ್ಬರ್ಗಾ	338	12.9385	12.9384
12	ಹಾಸನ	258	13.9062	13.2899
13	ಮಡಿಕೇರಿ	99	5.4364	5.4364
14	ಕೋಲಾರ	306	15.8140	15.7364

15	ಮಂಡ್ಯ	233	10.9719	10.9719
16	ಮೈಸೂರು	236	10.6493	8.5305
17	ರಾಯಚೂರು	164	8.9327	7.9482
18	ಶಿವಮೊಗ್ಗ	260	9.5526	9.5526
19	ತುಮಕೂರು	321	15.3613	14.3400
20	ಉತ್ತರ ಕನ್ನಡ	209	6.8114	6.9021
21	ಬಾಗಲಕೋಟೆ	163	7.5362	7.3872
22	ಚಾಮರಾಜನಗರ	121	6.9162	5.8698
23	ದಾವಣಗೆರೆ	230	10.9296	10.9296
24	ಗದಗ	106	4.2812	4.2812
25	ಹಾವೇರಿ	206	7.0518	7.0518
26	ಕೊಪ್ಪಳ	134	5.5632	5.5632
27	ಉಡುಪಿ	146	6.1646	5.7281
	ಒಟ್ಟು	5659	250.7518	240.9224

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎನ್ನುವಂಥಾದ್ದು ನನ್ನ ಪ್ರಶ್ನೆ. ಅದಕ್ಕೆ ಅವರು ಜಿಲ್ಲಾವಾರು ವಿವರಗಳನ್ನು ಕೊಟ್ಟಿದ್ದಾರೆ. ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ತಾವು ಗ್ರಾಮ ಪಂಚಾಯಿತಿಗಳಿಗೆ ಅನುದಾನ ಕೊಡುವಾಗ ಮೊದಲು ಒಂದು ಲಕ್ಷ ರೂಪಾಯಿಗಳು ಇದ್ದದ್ದನ್ನು ನಂತರ ಮೂರೂವರೆ ಲಕ್ಷ ರೂಪಾಯಿಗಳು ಎಂದು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಮಾಡಿದ್ದೀರಿ. ಆ ಮೂರೂವರೆ ಲಕ್ಷ ರೂಪಾಯಿಗಳ ಹಣ ಪೂರ್ತಿಯಾಗಿ ಇಲ್ಲಿಯವರೆಗೆ ಬಿಡುಗಡೆ ಆಗಿದೆಯಾ ಮತ್ತು ಈ ಅನುದಾನವನ್ನು ಬಿಡುಗಡೆ ಮಾಡುವಾಗ ಯಾವ್ಯಾವ ಇಲಾಖೆಗೆ ಸಂಬಂಧಪಟ್ಟ ಹಾಗೆ ನೀವು ಕಡಿತವನ್ನು ಮಾಡಿ ಈ ಗ್ರಾಮ ಪಂಚಾಯಿತಿಗಳಿಗೆ ಕೊಡುತ್ತೀರಿ. ಮತ್ತು ಕೇಂದ್ರದಿಂದ ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತಹ ಹಣ ಇವತ್ತು ಕುಡಿಯುವ ನೀರಿಗೆ ಬಂದಂತಹ ಹಣ ಹಿಂದಿನ ವರ್ಷದ್ದು 60 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. ಹಾಗೂ ನೀವೇನು ಗ್ರಾಮೀಣಾಭಿವೃದ್ಧಿಗೆಂದು ಬಜೆಟ್‌ನಲ್ಲಿ ಏನು ನಿಗದಿ ಮಾಡುತ್ತೀರಿ, ಆ ಹಣ ಪ್ರತಿವರ್ಷ ನೂರಾರು ಕೋಟಿ ರೂಪಾಯಿಗಳು ವೆಚ್ಚವಾಗದೇ ಇದೆ. ಅದರ ಬಗ್ಗೆ ನನ್ನ ಹತ್ತಿರ ಅಂಕಿಸಂಖ್ಯೆಗಳು ಇದೆ. ಅದಕ್ಕಾಗಿ ಇವತ್ತು ಗ್ರಾಮೀಣಾಭಿವೃದ್ಧಿಗೆ ಅದರಲ್ಲೂ ಕುಡಿಯುವ ನೀರಿನ ವ್ಯವಸ್ಥೆಗೆಂದು ಏನು ನೀವು ಬಜೆಟ್ ಅಲೋಕೇಷನ್ ಮಾಡಿದಿರಿ, ಅದನ್ನು ಖರ್ಚು ಮಾಡುವಂತಹ ಕೆಲಸವಾಗಬೇಕು ಹಾಗೂ ಅದಕ್ಕೆ ಉಸ್ತುವಾರಿ ಮಾಡಬೇಕೆಂದು ನನ್ನ ಸೂಚನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ತಾವು ಕೇಳಿರುವಂತಹ ಪ್ರಶ್ನೆ 2000-2001ನೇ ಸಾಲಿಗೆ ಸಂಬಂಧಪಟ್ಟದ್ದು. ಪಂಚಾಯಿತಿಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆ ಎನ್ನುವುದನ್ನು ನಾವು ಹೇಳಿದ್ದೇವೆ. ಹೋದ ವರ್ಷ ಡೆವಲಪ್‌ಮೆಂಟ್ ಗ್ರಾಂಟ್ ಒಂದೂವರೆ ಲಕ್ಷ ರೂಪಾಯಿಗಳು ಇರಲಿಲ್ಲ. ಈ ವರ್ಷ ಅದನ್ನು ಸೇರಿಸಿದ್ದೇವೆ. ಹೋದ ವರ್ಷ ಎರಡು ಲಕ್ಷ ರೂಪಾಯಿಗಳು ಮಾತ್ರ ಇತ್ತು. ಇದಕ್ಕೆ ಮುಂಚೆ ನಾನು ಉತ್ತರ ಕೊಡುವಾಗ ಎರಡು ಲಕ್ಷ ರೂಪಾಯಿಗಳಲ್ಲಿ 1,60,000 ರೂಪಾಯಿಗಳನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ಬಾಕಿ ಹಣವನ್ನೂ ಕೂಡ ಈ ವರ್ಷ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೇವೆ. ತಾವು ಕೇಳಿದ್ದು ಮೂರೂವರೆ ಲಕ್ಷ ರೂಪಾಯಿಗಳಲ್ಲಿ ಎರಡು ಲಕ್ಷ ರೂಪಾಯಿಗಳು ಸ್ಟಾಟ್ಯುಟರಿ ಗ್ರಾಂಟ್ ಆದರೆ ಒಂದೂವರೆ ಲಕ್ಷ ರೂಪಾಯಿಗಳು ಈ ವರ್ಷದಿಂದ ಪ್ರಾರಂಭವಾಗಿದೆ. ಪಂಚಾಯತ್ ಗ್ರಾಂಟ್ ಎಂದರೆ ಸ್ಟಾಟ್ಯುಟರಿ ಗ್ರಾಂಟ್ ಡೆವಲಪ್‌ಮೆಂಟ್ ಗ್ರಾಂಟ್ ಅಲ್ಲ ಮತ್ತು ಗ್ರಾಮ ಸಮೃದ್ಧಿ ಯೋಜನೆಯಲ್ಲಿ ಬರತಕ್ಕಂಥ ಹಣ ಹಾಗೂ ನೀರಿನ ನಿರ್ವಹಣೆಗಾಗಿ ಕೊಡತಕ್ಕಂಥ ಹಣ ಇದೆಲ್ಲಾ ಸೇರಿ ಅನುಬಂಧ-2ರಲ್ಲಿ ತೋರಿಸಿರುವಂತೆ 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ 240 ಕೋಟಿ ರೂಪಾಯಿಗಳು

ಖರ್ಚಾಗಿದೆ. ಬಾಕಿ ಉಳಿದಿರುವಂತಹ 10 ಕೋಟಿ ರೂಪಾಯಿಗಳು ಏನಿದೆ ಅದನ್ನು ಈ ವರ್ಷ ಖರ್ಚು ಮಾಡುತ್ತೇವೆ. ಇದರ ಬಗ್ಗೆ ಅನುಬಂಧ-(2)ರಲ್ಲಿ ಸ್ಪಷ್ಟವಾಗಿದೆ. ತಾವು ಕೇಳಿರತಕ್ಕಂಥ ಪ್ರಶ್ನೆ ಒಟ್ಟು ಡೀಸೆಂಟ್ರಲೈಸೇಷನ್ ಸಂಸ್ಥೆಗೆ ಎಷ್ಟು ಎನ್ನುವುದು ಮೊದಲನೇ ಪ್ರಶ್ನೆ. ಇನ್ನು ಪಂಚಾಯಿತಿಗಳಿಗೆ ಎಷ್ಟು ಪ್ರತ್ಯೇಕವಾಗಿ ಕೊಡಲಾಗುವುದೆಂದು ಎರಡನೇ ಪ್ರಶ್ನೆ ಇದೆ. ಅನುಬಂಧ-1ರಲ್ಲಿ ಒಟ್ಟು ಡೀಸೆಂಟ್ರಲೈಜ್ಡ್ ಪಂಚಾಯತ್ ರಾಜ್ ಸಂಸ್ಥೆಗೆ ಎಷ್ಟು ಕೊಟ್ಟಿದ್ದೇವೆ ಎಂದು ಜಿಲ್ಲಾವಾರು ಏವರಗಳನ್ನು ಕೊಟ್ಟಿದ್ದೇವೆ ಮತ್ತು ಪಂಚಾಯಿತಿಗಳಿಗೆ ಜಿಲ್ಲಾವಾರು ಎಷ್ಟು ಹಣ ಕೊಟ್ಟಿದ್ದೇವೆ ಎನ್ನುವುದನ್ನೂ ಕೂಡ ಅದರಲ್ಲಿ ಕೊಟ್ಟಿದ್ದೇವೆ. ಅಂದರೆ ಅಲಾಟ್ ಆಗಿದ್ದು ಎಷ್ಟು? ರಿಲೀಜ್ ಆಗಿದ್ದು ಎಷ್ಟು? ಖರ್ಚು ಮಾಡಿದ್ದು ಎಷ್ಟು? ಅದಷ್ಟು ಮಟ್ಟಿಗೆ ಅಲಾಟ್‌ಮೆಂಟಿಗೆ ರಿಲೀಸ್ ಮತ್ತು ಎಕ್ಸ್‌ಪೆಂಡಿಚರ್‌ಗೆ ಒಂದೇ ತರಹ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಸರ್ಕಾರದ ಉದ್ದೇಶ ಏನೆಂದರೆ, ಎಷ್ಟು ಅಲಾಟ್ ಆಗಿದೆ, ಎಷ್ಟು ರಿಲೀಜ್ ಆಗಿದೆ ಅದನ್ನು ಸಂಪೂರ್ಣವಾಗಿ ಖರ್ಚು ಮಾಡಬೇಕೆಂಬುದೇ ನಮ್ಮ ಪ್ರಯತ್ನ ಇದೆ. ಕೊಟ್ಟರತಕ್ಕ ಅಂಕಿ ಸಂಖ್ಯೆಗಳಿಂದ ಬಹಳಷ್ಟು ಮಟ್ಟಿಗೆ ಅದು ಸಾಧ್ಯವಾಗಿದೆ ಎಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಕಡಿತ ಮಾಡುತ್ತೀರೆಂಬುದನ್ನು ಹೇಳಿ. ಉದಾಹರಣೆಗೆ ಕೆ.ಪಿ.ಟಿ.ಸಿ.ಎಲ್.ಗೆ ಎಷ್ಟು ಕಡಿತ ಮಾಡುತ್ತೀರಿ?

ಶ್ರೀ ಎಂ.ವೈ.ಘೋರ್ಪಡೆ: ನೀರಿನ ವಿಷಯದಲ್ಲಿ ಕಡಿತ ಮಾಡುವಂತಹ ಪ್ರಶ್ನೆ ಬರುವುದಿಲ್ಲ. ಒಂದು ವೇಳೆ ನಾವು ಹೋದವರ್ಷ ಹಣ ಖರ್ಚಾಗದೆ ಹೋದರೂ, ಅದಕ್ಕೆ ಟ್ರೈಂ ಕೊಟ್ಟು ಮುಂದುವರೆಸುತ್ತೇವೆ. ನೀರಿನ ವಿಷಯದಲ್ಲಿ ಕಡಿತ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ತಾವು ಬಳ್ಳಾರಿ ಜಿಲ್ಲೆಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಮೇ 9ನೇ ತಾರೀಖಿ ''ಸಂಯುಕ್ತ ಕರ್ನಾಟಕ'' ಪತ್ರಿಕೆಯಲ್ಲಿ ಬಂದಿದೆ ಅದರಲ್ಲಿ ಒಂದು ಹೇಳಿಕೆ ಕೊಟ್ಟಿದ್ದೀರಿ. ಅದೇನೆಂದರೆ, ಪ್ರತಿ ಗ್ರಾಮ ಪಂಚಾಯಿತಿಗೆ ಏಳು ಲಕ್ಷ ರೂಪಾಯಿಗಳ ಅನುದಾನ ಎಂದು ಹೇಳಿರುವುದು ಇಲ್ಲಿ ಬಂದಿದೆ. ಮೂರೂವರೆ ಲಕ್ಷ ರೂಪಾಯಿಗಳ ಅನುದಾನಕ್ಕೆ ಇನ್ನೂ ನಾಲ್ಕು ಲಕ್ಷ ರೂಪಾಯಿಗಳ ಹೆಚ್ಚಿನ ಹಣವನ್ನು ನೂತನ ಯೋಜನೆಯಲ್ಲಿ ಸೇರಿಸಲಾಗುವುದು. ಹಾಗೂ ಇನ್ನೊಂದು ಮಾತು ಹೇಳಿದ್ದೀರಿ. ಶಾಸಕರಿಗೆ 25 ಲಕ್ಷ ರೂಪಾಯಿಗಳ ಅನುದಾನದಿಂದ 75 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗುವುದು ಮತ್ತು ಪ್ರತಿ ತಾಲ್ಲೂಕಿಗೆ ಡಾಂಬರೀಕರಣ, ರಸ್ತೆ ಅಭಿವೃದ್ಧಿ ಸಲುವಾಗಿ ಎರಡು ಕೋಟಿ ರೂಪಾಯಿಗಳನ್ನು

ಕೊಡುತ್ತೇವೆಂದು ಹೇಳಿದ್ದೀರಿ. ಇದನ್ನೆಲ್ಲಾ ಪ್ರಧಾನಪರಿಷತ್ತಿನ ಚುನಾವಣೆ ಸಂದರ್ಭದಲ್ಲಿ ತಾವು ಹೇಳಿದ್ದೀರಿ. ಅದಕ್ಕೆ ಬದ್ಧರಿದ್ದೀರೋ ಹೇಗೆ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಯಪೂರ್ವಕವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಅದಕ್ಕೂ ಚುನಾವಣೆಗೂ ಸಂಬಂಧ ಇಲ್ಲ. ವರ್ಷಕ್ಕೆ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಏಳು ಲಕ್ಷ ರೂಪಾಯಿಗಳೆಂದು ಇದೆ. ಮೂರೂವರೆ ಲಕ್ಷ ರೂಪಾಯಿಗಳು ಈ ವರ್ಷದಿಂದ ಇದೆ. ಅದರ ಜೊತೆಗೆ ಇನ್ನೂ ಮೂರೂವರೆ ಲಕ್ಷ ರೂಪಾಯಿಗಳನ್ನು 10ನೇ ಫೈನಾನ್ಸ್ ಕಮಿಷನ್‌ನಿಂದ ಹಾಗೂ ಜವಹರಲಾಲ್ ಯೋಜನೆಯಲ್ಲಿ ಅಭಿವೃದ್ಧಿ ಮತ್ತು ನೀರಿಗೋಸ್ಕರ ಇದನ್ನು ಸೇರಿಸಿದ್ದೇವೆ. ಹೆಚ್ಚು ಕಡಿಮೆ ಏಳರಿಂದ ಏಳೂವರೆ ಲಕ್ಷರೂಪಾಯಿಗಳು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಈ ವರ್ಷದಿಂದ ಅಷ್ಟು ಇದೆ ಎಂದು ಜನರಿಗೆ ಹಾಗೂ ಪಂಚಾಯಿತಿಗಳಿಗೆ ಹೇಳುವ ದೃಷ್ಟಿಯಿಂದ ನಾನು ಹೇಳಿದೆ. ಏಕೆಂದರೆ ಏಳು ಲಕ್ಷ ರೂಪಾಯಿಗಳು ಇರುವಾಗ ಅವರು ಯೋಜನೆ ಮಾಡಬಹುದು. ಇದರಲ್ಲಿ ಬಹಳಷ್ಟು ಅನ್‌ಟೈಡ್ ಗ್ರಾಂಟ್ ಇದೆ. ಸ್ಟಾಟ್ಯುಟರಿ ಗ್ರಾಂಟ್ ಎರಡು ಲಕ್ಷ ರೂಪಾಯಿಗಳು ಇರುವುದನ್ನು ಮೂರೂವರೆ ಲಕ್ಷ ರೂಪಾಯಿಗಳಿಗೆ ಏರಿಸಿದ್ದೇವೆ. ಅದು ಅನ್‌ಟೈಡ್ ಗ್ರಾಂಟ್. ಡೆವಲಪ್‌ಮೆಂಟ್‌ಗೋಸ್ಕರ ಉಪಯೋಗ ಮಾಡುವಂತಹ ಗ್ರಾಂಟ್ ಅದು. ಕನ್‌ಸಂಪ್‌ಷನ್‌ಗೋಸ್ಕರ ಅಲ್ಲ. ಇದು ಮಾಹಿತಿಗೆ ಇರಲಿ ಎಂದು ನಾವು ಸರ್ಕ್ಯುಲರ್ ಕಳುಹಿಸಿದ್ದೇವೆ. ಇದೇ ವರ್ಷ ಗ್ರಾಮಸಭೆ ಮಾಡಿ ಏಳೂವರೆ ಲಕ್ಷ ರೂಪಾಯಿಗಳು ಏನಿದೆ ಅದರಲ್ಲಿ ಯಾವ್ಯಾವ ಯೋಜನೆಗಳನ್ನು ಸ್ಥಳೀಯ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು ಎಂದು ನಾವು ಸರ್ಕ್ಯುಲರ್ ಕಳುಹಿಸಿದ್ದೇವೆ. ತಾವೂ ಸಹ ಅದರ ಬಗ್ಗೆ ಸ್ವಲ್ಪ ಗಮನ ಕೊಟ್ಟು ಗ್ರಾಮಸಭೆಯನ್ನು ಮಾಡಿಸಿ ಈ ಏಳು ಲಕ್ಷ ರೂಪಾಯಿಗಳು ಉಪಯುಕ್ತವಾಗಿ ಖರ್ಚಾಗುವ ರೀತಿಯಲ್ಲಿ ಮಾಡಿದರೆ ಸರ್ಕಾರಕ್ಕೆ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ತಾವು ಗ್ರಾಮೀಣಾಭಿವೃದ್ಧಿ ಡಾಂಬರೀಕರಣ ಹಾಗೂ ರಸ್ತೆ ಸಲುವಾಗಿ ಪ್ರತಿ ತಾಲ್ಲೂಕಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಡಲಾಗುತ್ತದೆ ಎಂದು ಹೇಳಿದ್ದೀರಿ.

ಶ್ರೀ ಎಂ.ವೈ.ಘೋರ್ಪಡೆ: ಬಳ್ಳಾರಿ ಜಿಲ್ಲೆಗೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಮ್ಮ ಪ್ಯಾಕೇಜ್ ಏನಿದೆ ಆ ಪ್ಯಾಕೇಜ್ ಪ್ರಕಾರ ರಸ್ತೆಗೋಸ್ಕರ ನಾವೇನು ತೆಗೆದು ಇಟ್ಟಿದ್ದೇವೆ, ಅದು ನಮ್ಮ ಹರಪನಹಳ್ಳಿ ಸೇರಿಕೊಂಡು 7-8 ತಾಲ್ಲೂಕುಗಳಿಗೆ

ಬರುತ್ತದೆ. ಒಂದು ತಾಲ್ಲೂಕಿಗೆ ಎರಡು ಕೋಟಿ ರೂಪಾಯಿಗಳು ಆಗುತ್ತದೆ. ಇದು ಪ್ರಧಾನಮಂತ್ರಿ ಸಡಕ್ ಯೋಜನೆಯನ್ನು ಹೊರತುಪಡಿಸಿ ಮಾಡಲಾಗುತ್ತದೆ. ಮತ್ತು ನೂರು ಲಕ್ಷ ರೂಪಾಯಿಗಳ ಕಾರ್ಯಕ್ರಮವೇನಿದೆ ಅಧರಲ್ಲಿ 60-70 ಲಕ್ಷ ರೂಪಾಯಿಗಳು ಖರ್ಚಾಗಿದೆ. ಪ್ಯಾಕೇಜ್‌ನಲ್ಲಿ ಎರಡು ಕೋಟಿ ರೂಪಾಯಿ ಪ್ರತಿಯೊಂದು ತಾಲ್ಲೂಕಿಗೆ ಬಳ್ಳಾರಿಯಲ್ಲಿ ಕೊಟ್ಟದೆ. ಅದು ಪ್ಯಾಕೇಜ್‌ಗೆ ಸಂಬಂಧಪಟ್ಟಿದ್ದು.

11.40 ಎ.ಎಂ.

ಪ್ರತಿ ತಾಲ್ಲೂಕಿಗೂ ''ಸಡಕ್ ಯೋಜನೆ'' ಮೇರೆಗೆ ಅಲ್ಲಿ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನೂ 50 ಲಕ್ಷ ರೂಪಾಯಿಗಳನ್ನು ''ನಬಾರ್ಡ್''ನಿಂದ ಲೋನ್ ತೆಗೆದುಕೊಂಡು ಪ್ರತಿ ತಾಲ್ಲೂಕಿಗೂ ಕೊಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದರೆ ಬಳ್ಳಾರಿ ಜಿಲ್ಲೆಗೆ ಮಾತ್ರ ಎರಡು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ.

ಮೈಸೂರು ನಗರದ ಪಡುವಾರಹಳ್ಳಿ ಮತ್ತು ಕುವೆಂಪುನಗರ ಹೌಸಿಂಗ್ ಬೋರ್ಡ್ ಕಾಲೋನಿಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸುವುದು.

206(2409)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಪಡುವಾರಹಳ್ಳಿ ಮತ್ತು ಕುವೆಂಪುನಗರ ಹೌಸಿಂಗ್ ಬೋರ್ಡ್ ಕಾಲೋನಿಗಳಲ್ಲಿ ಹೊಸದಾಗಿ ಸರ್ಕಾರಿ ಗ್ರಂಥಾಲಯಗಳನ್ನು ಪ್ರಾರಂಭಿಸಬೇಕೆಂಬ ಬಗ್ಗೆ ಸರ್ಕಾರದ ತೀರ್ಮಾನವೇನು?

ಆ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿವರಿಸುವುದು?

ಶ್ರೀ ಬಾಬುರಾವ್ ಚಿವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಮೈಸೂರು ನಗರದ ಪಡುವಾರಹಳ್ಳಿ ಮತ್ತು ಕುವೆಂಪು ನಗರ ಹೌಸಿಂಗ್